**Registered Post with Acknowledgement Due**

Ref: SR-II: RTI:F-1137:20-21/2792    Date: 12th October, 2020

To

Shri S.P.Shivappa, Adv.,
S&S Law Associates,
#02, 3rd Main Road, Opp.to Railway Station,
Maddur Hotel Building,
Ashoknagara,
**Mandya 571 401.**

**Sir,**

**Sub: Information sought under RTI Act, 2005 – reg.**

This has reference to your application dated 04/09/2020 under RTI Act, 2005 received at this office from our Mysore Sub-station on 22/09/2020. Please be informed that under the Electricity Act, 2003 and the Indian Telegraph Act, 1885:

1. POWERGRID has only "USER RIGHT" and 'No acquisition of land' is involved in the process of laying of its transmission line/tower.
2. 41.50 Guntas of land in Sy.No.51/82 of Chikkanahalli, Yelawala Hobli, Mysor Taluk is coming under the corridor of 400 KV D/C Hiriyur-Mysore for which compensation for area under the line corridor is fixed as per DC Mysore order dated 5/2/2020. Copy enclosed as Annexure-I.

As per section 19 of the Right to Information Act 2005, if required, you may file an appeal to the First Appellate Authority of the organisation within 30 days of the issue of this order. The address of the First Appellate Authority is given below:

Shri S.Ravi, Executive Director (SRTS-II)
Power Grid Corporation of India Ltd.,
Singanayakanahalli,
Yelahanka Hobli, Bangalore 560 064.
e-mail : sr2edo@powergrid.co.in
Tel.No.: 080-23093701

Thanking you,

Yours faithfully,

12/10/20

(V.RAJESH)
Sr.General Manager & CPIO
e-mail id: sr2cpio@powergrid.co.in
Tel.No.: 080-23093711

Encl.: As above

Copy to: ED(SRTS-II), Appellate Authority, POWERGRID, SRTS-II, Bangalore - for kind information.

Annexure - II

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು- 570005

## Office of the Deputy Commissioner, Mysore District, Mysore-570005

ದೂರುವಾಣಿ ಸಂಖ್ಯೆ:0821-2424079 ಫ್ಯಾಕ್ಸ್ ಸಂಖ್ಯೆ:2429012 & 2428383 E-Mail:-dcofficemysore@gmail.com

## ಪರಿಷ್ಕೃತ ಅಧಿಕೃತ ಜ್ಞಾಪನ

ವಿಷಯ: ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾರವರು 400 ಕೆವಿ D/C ಹಿರಿಯೂರು-ಮೈಸೂರು ವಿದ್ಯುತ್ ಮಾರ್ಗವನ್ನು ನಿರ್ಮಿಸುತ್ತಿದ್ದು, ಈ ವಿದ್ಯುತ್ ಮಾರ್ಗದ ಕಾರಿಡಾರ್ ನಲ್ಲಿ ಬರುವಂತಹ ಜಮೀನುಗಳಿಗೆ ಮತ್ತು ಗಿಡ-ಮರಗಳಿಗೆ ಪರಿಷ್ಕೃತ ಪರಿಹಾರ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: MYSDC/MAG1/MLO/94/2017, ದಿನಾಂಕ: 30.11.2017.
2. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ ದಿನಾಂಕ: 24.01.2020.

************

ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ರವರು ಹಿರಿಯೂರುರಿನಿಂದ ಮೈಸೂರಿನವರೆಗೆ 400 ಕೆವಿ D/C ವಿದ್ಯುತ್ ಮಾರ್ಗವನ್ನು ನಿರ್ಮಿಸುತ್ತಿದ್ದು, ಈ ಮಾರ್ಗವು ಮೈಸೂರು ಜಿಲ್ಲೆಯ ಮೈಸೂರು, ಹುಣಸೂರು ಮತ್ತು ಕೆ.ಆರ್.ನಗರ ತಾಲ್ಲೂಕುಗಳಲ್ಲಿ ಹಾದು ಹೋಗುತ್ತಿರುತ್ತದೆ. ಉಲ್ಲೇಖ (1)ರ ಅಧಿಕೃತ ಜ್ಞಾಪನದಂತೆ ಗೋಪುರ ನಿರ್ಮಾಣ ಮತ್ತು ತಂತಿ ಹಾದುಹೋಗುವ ಜಾಗಕ್ಕೆ ಈ ಕೆಳಕಂಡಂತೆ ಪರಿಹಾರವನ್ನು ಜಮೀನಿನ ರೈತರಿಗೆ ನೀಡಲು ನಿಗದಿ ಪಡಿಸಿ ಆದೇಶಿಸಲಾಗಿದೆ.

| ಕ್ರ.ಸಂ | ಗೋಪುರದ ಮಾದರಿ | ಗೋಪುರ ದಡಿಯಲ್ಲಿನ ಮುಖ್ಯ ಪ್ರದೇಶ(ಗುಂಟೆಗಳಲ್ಲಿ) | ಒಂದು ಗೋಪುರಕ್ಕೆ ನೀಡುವ ಸರಿಯಾದ ಮತ್ತು ಸಮರ್ಪಕ ಇಡಿಗಂಟು (ರೂ.ಗಳಲ್ಲಿ) |
|---|---|---|---|
| 1 | ಡಿಎ ಮಾದರಿ | 1.23 | 2,25,000/- |
| 2 | ಡಿಬಿ ಮಾದರಿ | 3.10 | 5,60,000/- |
| 3 | ಡಿಸಿ ಮಾದರಿ | 3.09 | 5,60,000/- |
| 4 | ಡಿಡಿ ಮಾದರಿ | 2.88 | 5,30,000/- |

ಒಂದು ನಿರ್ದಿಷ್ಟವಾದ ಸರ್ವೇ ನಂಬರಿನಲ್ಲಿ ಎರಡು ಅಥವಾ ಹೆಚ್ಚಿಗೆ ಗೋಪುರಗಳನ್ನು ಅಳವಡಿಸಿದ ಪ್ರಕರಣದಲ್ಲಿ ಹೆಚ್ಚುವರಿಯಾಗಿ ಪ್ರತಿಯೊಂದು ಹೆಚ್ಚುವರಿ ಗೋಪುರಕ್ಕೆ ಆ ಸರ್ವೇ ನಂಬರಿನಲ್ಲಿ ಹೆಚ್ಚುವರಿಯಾಗಿ ಶೇ.10ರಷ್ಟು ಪರಿಹಾರವನ್ನು ನೀಡಬೇಕು. ಮತ್ತು 46 ಮೀಟರ್ ವಿದ್ಯುತ್ ವಲಯ (ಕಾರಿ ಡಾರ್)ಗೆ ಅಂದರೆ ವಿದ್ಯುತ್ ತಂತಿ ಹಾದು ಹೋಗುತ್ತಿರುವ ಪ್ರದೇಶದಲ್ಲಿ ಭೂಮಾಲೀಕರುಗಳು ಆ ಪ್ರದೇಶದಲ್ಲಿ ಬೆಳೆಗಳನ್ನು ಬೆಳೆಯುವುದಕ್ಕೆ ಯಾವುದೇ ತೊಂದರೆ/ಅಡ್ಡಿ ಪಡಿಸದಿರುವುದರಿಂದ ಕೇವಲ ಈ ಪ್ರದೇಶದಲ್ಲಿ ಮರ/ ಮಾಳ್ಗಿ/ಕಟ್ಟಡಗಳನ್ನು ನಿರ್ಮಿಸಲು ನಿರ್ಬಂಧ ಇರುವುದರಿಂದ ಸದರಿ ಪ್ರದೇಶಕ್ಕೂ ಸಹ ರೈತರುಗಳಿಗೆ ಗೌರವವಾದ ಪರಿಹಾರವನ್ನು ನೀಡುವುದು ಸಮಂಜಸವೆಂದು ಅಭಿಪ್ರಾಯಪಟ್ಟು ಆ ಪ್ರದೇಶಗಳಿಗೆ ಎಕರೆ ಒಂದಕ್ಕೆ ರೂ.02.00 ಲಕ್ಷಗಳ

ದರವನ್ನು ನಿಗಧಿಪಡಿಸಿದೆ. ಕಾರಿಡಾರ್ ಗೆ ಒಳಪಡುವ ಪ್ರದೇಶವನ್ನು ಅಳತೆ ಮಾಡಿಸಿ ವಿಸ್ತೀರ್ಣವನ್ನು ಖಚಿತಪಡಿಸಿಕೊಂಡು ಅರ್ಹ ಭೂ ಮಾಲೀಕರಿಗೆ ಪಾವತಿಸತಕ್ಕದ್ದಾಗಿರುತ್ತದೆ.

ಈ ಮೇಲೆ ವಿವರಿಸಿದಂತೆ ನಿಗದಿಪಡಿಸಿದ ಪರಿಹಾರದ ಪೈಕಿ ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ ಯಾಚೇಗೌಡನಹಳ್ಳಿ, ಗುಂಗ್ರಾಲ್ ಛತ್ರ, ದಡದಕಲ್ಲಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು ನಾಗನಹಳ್ಳಿ ಕಾವಲ್, ಆನಂದೂರು, ಚಿಕ್ಕನಹಳ್ಳಿ, ಮೇಗಳಾಪುರ ಮತ್ತು ಮೈದನಹಳ್ಳಿ ಗ್ರಾಮದ ರೈತರು ವಿದ್ಯುತ್ ಮಾರ್ಗದ ಬದಲಾವಣೆಗೆ ಒತ್ತಾಯಿಸಿ ಕಾಮಗಾರಿಯನ್ನು ಅಡ್ಡಿಪಡಿಸುತ್ತಿರುವುದಾಗಿ ಮೆ|| ಪವರ್ ಗ್ರಿಡ್ ರವರು ತಿಳಿಸಿದ್ದು, ಅದರಂತೆ ಮೆ|| ಪವರ್ ಗ್ರಿಡ್ ಅಧಿಕಾರಿಗಳು, ರೈತ ಸಂಘ ಮುಖಂಡರು, ರೈತರು ಹಾಗೂ ಭೂ ಮಾಲೀಕರೊಂದಿಗೆ ದಿನಾಂಕ: 20.01.2020ರಂದು ನಡೆದ ಸಭೆಯಲ್ಲಿ ಮಾರ್ಗ ಬದಲಾವಣೆ ಸಾಧ್ಯವಿಲ್ಲವೆಂದು ರೈತರಿಗೆ ಮನವರಿಕೆ ಮಾಡಲಾಗಿರುತ್ತದೆ.

ರೈತರು ಈ ಮೇಲೆ ವಿವರಿಸಿದ ಗ್ರಾಮಗಳು ಮೈಸೂರು ನಗರಕ್ಕೆ ಹೊಂದಿಕೊಂಡಿರುವುದರಿಂದ ಸೂಕ್ತವಾದ ಹೆಚ್ಚಿನ ಪರಿಹಾರವನ್ನು ನಿಗದಿಪಡಿಸಿದ್ದಲ್ಲಿ ಕಾಮಗಾರಿಗೆ ಸಹಕರಿಸುವುದಾಗಿ ಕೋರಿಕೊಂಡಿದ್ದು, ಈ ಸಂಬಂಧ ದಿನಾಂಕ: 24.01.2020 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೈತ ಮುಖಂಡರೊಡನೆ ನಡೆದ ಸಭೆಯಲ್ಲಿ ಪರಿಹಾರವನ್ನು ವಿದ್ಯುತ್ ಮಾರ್ಗ ಹಾದು ಹೋಗುವ ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ ಗ್ರಾಮಗಳಾದ ಯಾಚೇಗೌಡನಹಳ್ಳಿ, ಗುಂಗ್ರಾಲ್ ಛತ್ರ, ದಡದಕಲ್ಲಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು ನಾಗನಹಳ್ಳಿ ಕಾವಲ್, ಆನಂದೂರು, ಚಿಕ್ಕನಹಳ್ಳಿ, ಮೇಗಳಾಪುರ ಮತ್ತು ಮೈದನಹಳ್ಳಿ ಗ್ರಾಮ ವ್ಯಾಪ್ತಿಗಳಲ್ಲಿನ ಜಮೀನುಗಳಿಗೆ ಮತ್ತು ಮರ-ಗಿಡಗಳಿಗೆ ಪರಿಷ್ಕೃತ ಪರಿಹಾರವನ್ನು ನಿಗದಿಪಡಿಸಲು ನಿರ್ಧರಿಸಿ ಅದರಂತೆ ಪರಿಹಾರವನ್ನು ಅರ್ಹ ಭೂಮಾಲೀಕರಿಗೆ /ರೈತರಿಗೆ ಪಾವತಿಸಲು ಆದೇಶಿಸಿದೆ.

ದಿನಾಂಕ: 05.02.2020

ಸಂಖ್ಯೆ:MYSDC/MAG1/MLO/94/2017

# ಆದೇಶ

ವಿದ್ಯುತ್ ಗೋಪುರದ ಜಾಗಕ್ಕೆ ನಿಗಧಿಯಾಗಿರುವ ಮೊತ್ತಕ್ಕೆ ಹೆಚ್ಚುವರಿಯಾಗಿ ಶೇ.10ರಷ್ಟು ಸೊಲೇಶಿಯಂ ಅನ್ನು ಪಾವತಿಸುವುದು. ವಿದ್ಯುತ್ ಮಾರ್ಗ ಕಾರಿಡಾರ್ ನ 46 ಮೀಟರ್ ಅಗಲಕ್ಕೆ (ಪ್ರಸರಣ ಮಾರ್ಗದ ಮಧ್ಯದಿಂದ ಎಡ ಭಾಗಕ್ಕೆ 23 ಮೀಟರ್ ಹಾಗೂ ಬಲ ಭಾಗಕ್ಕೆ 23 ಮೀಟರ್) ಒಂದು ಎಕರೆ ಜಮೀನಿಗೆ ರೂ.25,00,000/- (ಇಪ್ಪತ್ತೈದು ಲಕ್ಷಗಳು ಮಾತ್ರ)ರಂತೆ ಅಂದರೆ ಪ್ರತಿ ಗುಂಟೆಗೆ ರೂ.62,500/-(ಅರವತ್ತೆರಡು ಸಾವಿರದ ಐದು ನೂರು ಮಾತ್ರ)ಗಳ ಪರಿಹಾರವನ್ನು ಪಾವತಿಸುವುದು ಹಾಗೂ ಜಮೀನು ಈಗಾಗಲೇ ಭೂ ಪರಿವರ್ತನೆಯಾಗಿದ್ದಲ್ಲಿ ಎಕರೆ ಒಂದಕ್ಕೆ ರೂ.41,25,000/-( ನಲವತ್ತೊಂದು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ)ಗಳನ್ನು ಅಂದರೆ ಪ್ರತಿ ಗುಂಟೆಗೆ ರೂ.1,03,125/-( ಒಂದು ಲಕ್ಷ ಮೂರು ಸಾವಿರದ ಒಂದು ನೂರ ಇಪ್ಪತ್ತೈದು ಮಾತ್ರ) ಪಾವತಿಸುವುದು.

ಮಾವಿನ ಮರಕ್ಕೆ ರೂ.30,648/-(ಮೂವತ್ತು ಸಾವಿರದ ಆರು ನೂರ ನಲವತ್ತೆಂಟು ಮಾತ್ರ)ಗಳನ್ನು ನಿಗದಿಪಡಿಸಿದ್ದು, ಈ ಬೆಲೆಗೆ ಶೇ.40 ರಷ್ಟು ಸೊಲೇಷಿಯಮ್ ಅನ್ನು ಸೇರಿಸಿ ಒಟ್ಟು ರೂ.42,907/- ( ನಲವತ್ತೆರಡು ಸಾವಿರದ ಒಂಬತ್ತು ನೂರ ಏಳು ಮಾತ್ರ)ಗಳನ್ನು ಪ್ರತಿ ಮರಕ್ಕೆ ಪರಿಹಾರವಾಗಿ ಪಾವತಿಸುವುದು. ಮಾವಿನ ಸಸಿಗಳಿಗೆ ತೋಟಗಾರಿಕೆ ಇಲಾಖೆಯ ಮೌಲ್ಯ ಮಾಪನದ ಬೆಲೆಯ ಮೇಲೆ ಶೇ 40ರಷ್ಟು ಸೋಲೇಶಿಯಂ ಅನ್ನು ಸೇರಿಸಿ ಪರಿಹಾರವಾಗಿ ಪಾವತಿಸುವುದು. ಪ್ರತಿ ತೆಂಗಿನ ಮರಕ್ಕೆ (03 ವರ್ಷಕ್ಕೆ ಮೇಲ್ಪಟ್ಟಿದ್ದು) ರೂ.17,945/-(ಹದಿನೇಳು ಸಾವಿರದ ಒಂಬೈನೂರ ನಲವತ್ತೈದು ಮಾತ್ರ)ಗಳನ್ನು ನಿಗದಿಪಡಿಸಿದ್ದು, ಈ ಬೆಲೆಗೆ ಶೇ40ರಷ್ಟು ಸೋಲೇಶಿಯಂ ಅನ್ನು ಸೇರಿಸಿ ಒಟ್ಟು ರೂ.25,123/- (ಇಪ್ಪತ್ತೈದು ಸಾವಿರದ ನೂರ ಇಪ್ಪತ್ಮೂರು ಮಾತ್ರ)ಗಳನ್ನು ಪರಿಹಾರವಾಗಿ ಪಾವತಿಸುವುದು.

ತೆಂಗಿನ ಸಸಿಗಳಿಗೆ ತೋಟಗಾರಿಕೆ ಇಲಾಖೆಯ ಮೌಲ್ಯ ಮಾಪನದ ಬೆಲೆಯ ಮೇಲೆ ಶೇ40ರಷ್ಟು ಸೋಲೆಶಿಯಂ ಅನ್ನು ಸೇರಿಸಿ ಪರಿಹಾರವಾಗಿ ಪಾವತಿಸುವುದು. ಅರಣ್ಯ ಇಲಾಖೆಯಿಂದ ಮೌಲ್ಯ ಮಾಪನವಾಗುವ ಮಾರ್ಕಿ ಮರಗಳಿಗೆ ಶೇ 40ರಷ್ಟು ಸೊಲೇಶಿಯಂ ಅನ್ನು ಸೇರಿಸಿ ಪರಿಹಾರವನ್ನು ಪಾವತಿಸುವುದು.

ಉಲ್ಲೇಖ (2)ರ ನಡಾವಳಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ದಿನಾಂಕ:25.01.2020 ರಿಂದ ಮೆ|| ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ರವರು ಮೇಲ್ಕಂಡ 09 ಗ್ರಾಮಗಳಲ್ಲಿ ವಿದ್ಯುತ್ ಲೈನ್ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿದ್ದು ಸದರಿ ಕಾಮಗಾರಿಗೆ ರೈತರು/ಭೂಮಾಲೀಕರು ಯಾವುದೇ ರೀತಿಯ ತೊಂದರೆ ಅಥವಾ ಅಡಚಣೆಯನ್ನು ಮಾಡದೆ ಸಹಕರಿಸಬೇಕು. ಕಂದಾಯ ಮತ್ತು ಭೂಮಾಪನಾಧಿಕಾರಿಗಳ ಇಲಾಖೆಯವರು, ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆಗಳ ಸಹಯೋಗದೊಂದಿಗೆ ಲೈನ್ ಕಾರಿಡಾರಿನ ಅಳತೆ/ಸರ್ವೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳುವುದು ಮತ್ತು ಸರ್ವೆ ವರದಿಗಳನ್ನು ಪಡೆದ ನಂತರ ಮೆ|| ಪವರ್ ಗ್ರಿಡ್ ರವರು ಅರ್ಹ ಭೂಮಾಲೀಕರಿಗೆ/ರೈತರಿಗೆ ಪರಿಹಾರವನ್ನು ಪಾವತಿಸುವುದು.

(ಅಭಿರಾಂ ಜಿ ಶಂಕರ್)

ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ,

1. ಪೋಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು, ಪವರ್ ಗ್ರಿಡ್ , ಮೈಸೂರು.
3. ಉಪ ನಿರ್ದೇಶಕರು, ಭೂದಾಖಲೆಗಳ ಇಲಾಖೆ, ಮೈಸೂರು.
4. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಮೈಸೂರು.
5. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವಿಭಾಗ, ಅಶೋಕಪುರಂ ,ಮೈಸೂರು.
6. ತಹಶೀಲ್ದಾರ್, ಮೈಸೂರು ತಾಲ್ಲೂಕು, ಮೈಸೂರು .